# <u>ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 05.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 127.
3. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 179.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Gorebala Hanumantha Rayaru.
5. **Note:** Lyrics in the above refernces are same and the singer has followed these wordings.
6. **Note:** '*' for this see the meanings below. Explanation is also given. **"ಹಿರಿಯ ಸೊಸೆಯ"** "hiriya soseya" is correct.

ರಾಗ : ಕಲ್ಯಾಣಿ ತಾಳ: ಆದಿ

ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ ‖ ಪ ‖

ವಾಗಭಿಮಾನಿ ವರ ಬ್ರಹ್ಮಾಣಿ
ಸುಂದರವೇಣಿ ಸುಚರಿತ್ರಾಣಿ ‖ ಅಪ ‖

ಜಗದೊಳು ನಿಮ್ಮ ಪೊಗಳುವೆನಮ್ಮ
ಹರಿಯ ತೋರಿಸೆಂದು ಪ್ರಾರ್ಥಿಪೆನಮ್ಮ ‖ ೧ ‖

ಪಾಡುವೆ ಶ್ರುತಿಯ ಬೇಡುವೆ ಮತಿಯ
ಪುರಂದರ ವಿಠಲನ ಸೋದರ (ಹಿರಿಯ)* ಸೊಸೆಯ ‖ ೨ ‖

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ವಾಗಭಿಮಾನಿ** – ವಾಗ್ರೂಪವಾದ ಶಾಸ್ತ್ರಗಳಿಗೆ ಅಭಿಮಾನಿ ದೇವತೆ.

**ಬ್ರಹ್ಮಾಣಿ** – ಮೂರನೆಯ ಕಕ್ಷೆಯಲ್ಲಿ ಮಹತ್ತತ್ತ್ವಕ್ಕೆ ಅಭಿಮಾನಿಯಾದ ಬ್ರಹ್ಮನ ಹೆಂಡತಿ; ಅವ್ಯಕ್ತಾಭಿಮಾನಿನಿ.

**ಸುಂದರ ವೇಣಿ** – ಚೆಲುವಾದ ಜಡೆಯುಳ್ಳವಳು.

**ಸುಚರಿತ್ರಾಣಿ** – ಒಳ್ಳೆಯ ನಡತೆಯುಳ್ಳವಳು; ಧರ್ಮಾಭಿಮಾನಿನಿ.

**ಹರಿಯ ತೋರಿಸೆಂದು** – ಎಲ್ಲ ಶಾಸ್ತ್ರಗಳ ತಾತ್ಪರ್ಯವೂ ವಿಷ್ಣುವಿನಲ್ಲೇ ಇರುವುದರಿಂದ, ಶಾಸ್ತ್ರಾಭಿಮಾನಿನಿಯಾದ ಸರಸ್ವತಿಯ ನೆರವನ್ನು ದಾಸರು ಬೇಡಿದ್ದಾರೆ.

*__ಪುರಂದರ ವಿಠಲನ ಸೋದರ ಸೊಸೆಯ__ – ಇದು ಅಶುದ್ಧವಾದ ಪಾಠ; ವಿಷ್ಣುವಿನ ಮಗ ಬ್ರಹ್ಮ; ಬ್ರಹ್ಮನ ಹೆಂಡತಿ ಸರಸ್ವತಿ ಎಂದಾದರೆ ವಿಷ್ಣುವಿನ ಸೊಸೆಯೇ ಆಯಿತು; 'ಸೋದರಸೊಸೆ' ಎಂಬ ನೆಂಟು ಕೂಡುವುದಿಲ್ಲ. ಮುಂದಿನ ಕೃತಿಯಲ್ಲಿ "ಇಂದಿರಾರಮಣನ ಹಿರಿಯ ಸೊಸೆಯು ನೀನು" ಎಂದಿರುವುದನ್ನು ಗಮನಿಸಿದರೆ, ಇಲ್ಲಿ **'ಹಿರಿಯ' ಎಂಬುದಕ್ಕೆ ಬದಲಾಗಿ 'ಸೋದರ' ಎಂದು ಲಿಪಿಕಾರರು ಬರೆದರು ಎಂದು ತೋರುತ್ತದೆ.** **ಆದ್ದರಿಂದ ಓದುಗರು, ಸಂಗೀತಕಾರರು "ಹಿರಿಯ ಸೊಸೆಯ" ಎಂದು ತಿದ್ದಿಕೊಳ್ಳುವುದೇ ಉಚಿತವೆಂದು ತೋರುತ್ತದೆ.**

**Classification:** Keertane
**Ankita:** purandara vittala
**Location:** NA
**Category:** Saraswati Stuti
**Sub-Category:** sharana, saraswati, brahma, loka, Krishna, shruti,
**Pravachana:** NA
**Explanation:** NA